**<u>ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.</u>**

**<u>ಸಿ ಸಿ ನಂಃ877/2022</u>**

| | | | |
|---|---|---|---|
| ಸಾಕ್ಷಿಯ ಹೆಸರು | : | ಜೈ ತೊಂಟಾರಾವ್ | ಸಿ.ಡಬ್ಲ್ಯು.2 |
| ತಂದೆಯ ಹೆಸರು | : | ಜಯಣ್ಣ | ಪಿ.ಡಬ್ಲ್ಯು.2 |
| ವಯಸ್ಸು | : | 50 ವರ್ಷ | |
| ಉದ್ಯೋಗ | : | ವ್ಯವಸಾಯ | |
| ವಾಸ ಸ್ಥಳ | : | ತರೀಕೆರೆ | |

**ದಿನಾಂಕಃ 18-07-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>**

ನಾನು ಎಂ ಪಿ ಎಂ ಫಾರೆಸ್ಟ್ ವಾಚರ್ ಎಂದು ಜಂಬದ ಹಳ್ಳದಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಕೆಲಸಕ್ಕೆ ಟೈಮಿಂಗ್ ಇರುವುದಿಲ್ಲ. ಮೃತ ಐಯಪ್ಪನ ಪರಿಚಯ 10 ವರ್ಷಗಳಿಂದಲೂ ಇದೆ. ನನ್ನ ಕೆಲಸ ಮುಗಿಸಿಕೊಂಡು ಈಗ 2 ವರ್ಷಗಳ ಹಿಂದೆ ರಾತ್ರಿ 9 ಗಂಟೆ ಸುಮಾರಿಗೆ ತರೀಕೆರೆಗೆ ಕಡೆ ನನ್ನ ಬೈಕ್ ಮೇಲೆ ಬರುತ್ತಿದ್ದಾಗ ಯಲಗೆರೆಯಿಂದ ಮುಂದೆ ರಸ್ತೆ ಪಕ್ಕದಲ್ಲಿ ಒಂದು ವಾಹನ ಬಿದ್ದಿತ್ತು, ಅದರ ಪಕ್ಕದಲ್ಲಿ ಐಯಪ್ಪ ಕೂಡಾ ಬಿದ್ದಿದ್ದ. ಅದೇ ಸಮಯಕ್ಕೆ ತರೀಕೆರೆಯಿಂದ ಇಬ್ಬರು ವ್ಯಕ್ತಿಗಳು ಕೂಡಾ ಬಂದರು. ಮೊಬೈಲ್ ಟಾರ್ಚ್ ಮೂಲಕ ಮುಖ ನೋಡಿ ಮನೆಯವರು ಕರೆ ಮಾಡಿ ತಿಳಿಸಿದೆನು. ನಾನು ನೋಡಿದಾಗ ಯಾವುದೇ ವಾಹನ ಸಂಚಾರ ಇರಲಿಲ್ಲ ಆದರೆ ಯಾವುದೋ ಒಂದು ಟ್ರ್ಯಾಕ್ಟರ್ ಯಲಗೆರೆ ಊರಿನೊಳಗೆ ತಿರುವು ಪಡೆದುಕೊಂಡಿತು ನಾನು ಅದೇ ಟ್ರ್ಯಾಕ್ಟರ ಇರಬಹುದು ಎಂದು ಅಂದಾಜಿಸಿದ್ದೇನೆ. ಟ್ರ್ಯಾಕ್ಟರ ಸುಮಾರು 500 ಮೀಟರ ಅಂತರದಲ್ಲಿ ತಿರುವು ಪಡೆದುಕೊಂಡಿತ್ತು. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಮತ್ತು ಹೇಳಿಕೆ ಕೊಟ್ಟಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ-</u>**

ನಾನು ಐಯಪ್ಪನ ಹಿಂದೆ ಸುಮಾರು 20 ಅಡಿ ದೂರದಲ್ಲಿ ಹೋಗುತ್ತಿದ್ದೆ, ನಾನು ಹೇಳಿದ ಟ್ರ್ಯಾಕ್ಟರನ ಟ್ರ್ಯಾಲಿ ಬಡಿದು ಐಯಪ್ಪನಿಗೆ ಅಪಘಾತ ಆಗಿದೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ಚಾಲನೆ ಮಾಡುತ್ತಿದ್ದ ಎಂದರೆ ಸರಿಯಲ್ಲ. ಸಾಕ್ಷಿಗೆ ಹೇಳಿಕೆ ಭಾಗವನ್ನು ಓದಿದಾಗ ಅದನ್ನು ನಿರಾಕಸಿರುತ್ತಾರೆ. ಹೇಳಿಕೆಯ ಭಾಗವನ್ನು ನಿಪಿ.5 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***